BUDGET FOR 1958-59—DEMANDS FOR GRANTS

Demand No. 7—Motor Vehicles Act Administration.

12. Taxes on Vehicles.

Mr. SPEAKER.—Motion moved:

"That a sum not exceeding Rs. 6,60,000 be granted to the Government to defray the charges which will come in course of payment during the year ending 31st day of March 1959 in respect of '12 Taxes on Vehicles'."

Demand No. 19—Scientific Departments.

36. *Scientific Departments.*

Mr. SPEAKER.—Motion moved:

"That a sum not exceeding Rs. 10,61,000 be granted to the Government to defray the charges which will come in course of payment during the year ending 31st day of March 1959 in respect of '36 Scientific Departments'."

Demand No. 28—Miscellaneous Departments.

47. Miscellaneous Departments.

Mr. SPEAKER.—Motion moved:

"That a sum not exceeding Rs. 58,81,000 be granted to the Government to deferay the charges which will come in course of payment during the year ending 31st day of March 1959 in respect of '47 Miscellaneous Departments'."

Demand No. 44—Road and Water Transport Schemes.

XLVI-A. Receipts from Road and Water Transport Schemes Working Expenses.

Mr. SPEAKER.—Motion moved:

"That a sum not exceeding Rs. 4,09,70,000 be granted to the Government to defray the charges which will come in course of payment during the year ending 31st day of March 1959 in respect of 'XLVI-A. Receipts from Road and Water Transport Schemes Working Expenses'."

Demand No. 54—Capital Outlay on Road Transport Schemes.

82-B. *Capital Outlay on Road and Water Transport Schemes outside the Revenue Account.*

Mr. SPEAKER.—Motion moved:

"That a sum not exceeding Rs. 70,00,000 be granted to the Government to defray the charges which will come in course of payment during the year ending 31st day of March 1959 in respect of '82-B Capital Outlay on Road and Water Transport Schemes outside the Revenue Account'."

*ಶ್ರೀ ಎಚ್. ಜಿ. ನರಸಿಂಹೇಗೌಡ (ಶ್ರವಣಬೆಳಗೊಳ).—ಸ್ವಾಮಿ, ಮೊದಲನೆಯದಾಗಿ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮ್ಮನ್ನ ವಂದಿಸುತ್ತಾ ಪೂರ್ತಿ ಡಿಮ್ಯಾಂಡ್‌ಮೇಲೆ ಮಾತನಾಡುವುದಕ್ಕೆ ಹೆಚ್ಚು ಕಾಲ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಮೊದಲನೆಯದಾಗಿ ಮಿನರಲ್ಸ್ ಡಿಪಾರ್ಟ್‌ಮೆಂಟಿನ ವಿಷಯ ಮಾತನಾಡಲಿಕ್ಕೆ ಇಚ್ಛಿಸುತ್ತೇನೆ. ಇದು ಮುಖ್ಯವಾಗಿ ಅಂಕಿಅಂಶಗಳನ್ನು ಕಂಡುಹಿಡಿಯುತಕ್ಕ ಶಾಖೆ. ಮೊದಲು ಆಯಾಯ ಇಲಾಖೆಯಲ್ಲಿ ಪ್ರತ್ಯೇಕವಾಗಿ ಅಂಕಿಅಂಶಗಳನ್ನು ಕಂಡುಹಿಡಿದು ಸರ್ಕಾರದವರಿಗೆ ವರದಿಮಾಡತಕ್ಕ ಪದ್ಧತಿ ಇತ್ತು. ಆದರೆ ಇತ್ತೀಚೆಗೆ ಎಲ್ಲ ಇಲಾಖೆಗಳ ಅಂಕಿಅಂಶಗಳನ್ನು ಕಂಡುಹಿಡಿಯತಕ್ಕ ಶಾಖೆಯನ್ನು ಒಂದುಗೂಡಿಸಿ ಪ್ರತ್ಯೇಕವಾದ ಒಂದು ಡಿಪಾರ್ಟ್‌ಮೆಂಟನ್ನು ಮಾಡಿದರು. ಬಡ್ಜೆಟ್‌ನಲ್ಲಿ ನೋಡುವುದಾದರೆ ಇಲ್ಲಿ ಒದಗಿಸಿರತಕ್ಕ ಹಣ ನಿಜವಾಗಿಯೂ ಅನ್ಯಾಯ ಎಂದು ಹೇಳಬೇಕಾಗಿದೆ. ಏಕೆಂದರೆ ನಮ್ಮ ಮುಂದೆ ಪ್ರತಿವರ್ಷವೂ ಬರತಕ್ಕ ಹ್ಯಾಂಡ್‌ಬುಕ್‌ನಲ್ಲಿರುವ ಅಂಕಿಅಂಶಗಳ ವಿವರವನ್ನು ತೆಗೆದುಕೊಳ್ಳುವುದಾದರೆ, ಅದೇಬೇರೆ, ಮಂತ್ರಿಗಳು ಕೊಡತಕ್ಕ ಅಂಕಿಅಂಶಗಳ ಉತ್ತರವೇ ಬೇರೆ ಇರುತ್ತದೆ. ಈ ಅಂಕಿಅಂಶಗಳಿಗೂ, ಸಂಬಂಧಪಟ್ಟ ಇಲಾಖೆಯವರು ಕೊಡತಕ್ಕ ಅಂಕಿಅಂಶಗಳ ಉತ್ತರಕ್ಕೂ ತಾರತಮ್ಯ, ವ್ಯತ್ಯಾಸ ಇರುವುದರಿಂದ ಅಂಕಿಅಂಶ ಕಂಡುಹಿಡಿಯತಕ್ಕ ಶಕ್ತಿ ಇಲಾಖೆಗೆ ಕುಂದಿ ಹೋಗಿದೆ. ಏಕೆಂದರೆ ಈ ಇಲಾಖೆಯವರು ಸಂಬಂಧಪಟ್ಟ ಇಲಾಖೆಯವರಿಂದ ರಿಪೋರ್ಟ್ ತರಿಸಿ, ಅವರು ಎಷ್ಟು ಭಾಗ ಅಂಕಿಅಂಶಗಳನ್ನು ಕೊಡುತ್ತಾರೋ ಅವನ್ನು ಕ್ರೋಡೀಕರಿಸಿ ಹೇಳುತ್ತಾರೆ. ಇವುಗಳನ್ನೆಲ್ಲ ಕ್ರೋಡೀಕರಿಸಿ ನೋಡಿದಂಥ ಕಾಲದಲ್ಲಿ ಆ ಅಂಕಿಅಂಶಗಳಿಗೆ ಅವುಗಳನ್ನು ಕೂಡಿದಾಗ ಬರತಕ್ಕಂಥ ಅಂಕಿಗಳಿಗೂ ಒಂದಕ್ಕೊಂದಕ್ಕೆ ಸಂಬಂಧವಿಲ್ಲ; ಅವು ನರಿಯಾದಂಥ ಅಂಕಿಅಂಶಗಳಲ್ಲವೆಂಬುದಾಗಿ ನನಗೆ ತಿಳಿದುಬಂದಿದೆ. ಆದರೆ ಪ್ರತಿಯೊಂದು ಇಲಾಖೆಗೂ ಅದರದರ ಕೆಲಸಕಾರ್ಯಗಳು ಎಷ್ಟು ಚುರುಕಾಗಿ ನಡೆದಿರುತ್ತವೆಂಬುದರ ಬಗ್ಗೆ

ಅಂಕಿಅಂಶಗಳನ್ನೊದಗಿಸಲು ಇಂಟ್ರೆಸ್ಟ್ ಇದ್ದೇ ಇರುತ್ತದೆ. ಇಲಾಖೆ ಮೊಖ್ತೇಸರರಿಗೆಲ್ಲ ಈ ವಿಚಾರದಲ್ಲಿ ಬಹಳ ಶ್ರದ್ಧೆ ಇರುತ್ತದೆ. ಆದರೆ ಆ ವಿಚಾರಗಳ ಬಗ್ಗೆ ಆಯಾಯ ಇಲಾಖೆಗೆ ಬರೆದು ತರಿಸಿಕೊಳ್ಳಬೇಕು. ಆದರೆ ಹಾಗೆ ಮಾಡುತ್ತಿಲ್ಲವೆಂದು ಕಾಣುತ್ತಿದೆ. ಈ ಇಲಾಖೆ ಅಷ್ಟೊಂದು ಉತ್ಸಾಹದಿಂದ ಕೆಲಸ ಮಾಡುತ್ತಿಲ್ಲವೆಂದು ಈ ಹಿಂದೆ ನಡೆದ ಪ್ರಶ್ನೋತ್ತರದ ವೇಳೆಯಲ್ಲಿ ಶ್ರೀ ಜೆ. ಬಿ. ಮಾಲ್ಲಾರಾಧ್ಯರವರು ಹೇಳಿದ್ದು ನ್ಯಾಯವಾಗಿದೆ. ಆದುದರಿಂದಲೇ ಈ ದಿವಸ ಈ ಹ್ಯಾಂಡ್‌ಬುಕ್ಕಿನಲ್ಲಿ ಕೊಟ್ಟಿರತಕ್ಕ ಅಂಕಿಅಂಶಗಳಿಗೂ ಸರ್ಕಾರದವರು ನಮಗೆ ಇಲ್ಲಿ ತಿಳಿಸಿರತಕ್ಕ ಅಂಕಿ ಅಂಶಗಳಿಗೂ ಅನೇಕ ವಿಷಯಗಳಲ್ಲಿ ವ್ಯತ್ಯಾಸ ಕಾಣುತ್ತಿದೆ. ಆದುದರಿಂದ ಸರ್ಕಾರದವರು ಬಡ್ಜೆಟ್ ಪುಸ್ತಕದ 341ನೆಯ ಪುಟದಲ್ಲಿ (ಡಿ) ಸ್ಟೇಟ್-ಸ್ಟ್ಯಾಟಿಸ್ಟಿಕ್ಸ್ ಎಂಬ ಬಾಬಿಗೆ ಒದಗಿಸಿರತಕ್ಕ 8,21,100 ರೂಪಾಯಿಗಳು ಬಹಳ ಜಾಸ್ತಿಯಾಯಿತು. ಈ ಇಲಾಖೆಯಲ್ಲಿ ಸಿಬ್ಬಂದಿಯನ್ನು ಕಡಮೆಮಾಡಲು ಸಾಧ್ಯವಿದೆಯೆಂಬುದನ್ನು ಈ ಇಲಾಖೆಯ ಅಫಿಷಿಯಲ್ ರಿಪೋರ್ಟ್‌ನ್ನು ನೋಡಿದರೆ ಗೊತ್ತಾಗುತ್ತದೆ. ಆದುದರಿಂದ ಈ ಇಲಾಖೆಗೆ ಈ ದಿವಸ ಒದಗಿಸಿರತಕ್ಕ ಮೊಬಲಗು ಬಹಳ ಜಾಸ್ತಿ ಆಯಿತೆಂದು ಹೇಳುತ್ತೇನೆ. ಈ ಹಣವನ್ನು ಕಡಮೆಮಾಡಬೇಕು. ಇನ್ನು ಈ ಇಲಾಖೆಯಲ್ಲಿ ಈ ದಿವಸ ಸಿಬ್ಬಂದಿಯನ್ನು ನೇರವಾಗಿ ಅಪಾಯಿಂಟ್‌ಮಾಡಿಕೊಳ್ಳುವಂಥ ಪದ್ಧತಿ ಇದೆ. ಈ ಪದ್ಧತಿ ಮೊದಲು ನಿಂತುಹೋಗಬೇಕು. ಈ ಇಲಾಖೆಯಲ್ಲಿ ಇತರ ಇಲಾಖೆಗಳಲ್ಲಿದ್ದಹಾಗೆ ಯಾವುದಾದರೊಂದು ಸ್ಥಾನ ಖಾಲಿ ಬಿದ್ದಕೂಡಲೇ ಅದನ್ನು P.S.C.ಗೆ ತಿಳಿಸಿ ತನ್ಮೂಲಕ ಆ ಸ್ಥಾನವನ್ನು ಭರ್ತಿಮಾಡತಕ್ಕಂಥ ಪದ್ಧತಿ ಏಕೆ ತಪ್ಪು ಹೋಗಿದೆಯೋ ನಾನು ಕಾಣೆ. ಈ ಇಲಾಖೆಯಲ್ಲಿ ಒಬ್ಬ ಮ್ಯಾನೇಜರ್ ಇದ್ದಾರೆ. ಅವರ ವಿಚಾರವೆಲ್ಲ ನನಗೆ ತಿಳಿದುಬಂದಿದೆ. ಅವರು ಅಲ್ಲಿ ಯಾವ ಒಂದು ವೇಕೆನ್ಸಿ ಖಾಲಿಯಿದ್ದರೂ ಅದಕ್ಕೆ ತನ್ನ ಕಡೆಯ ಜನರನ್ನೇ ತಂದು ಹಂಗಾಮಿಯಾಗಿ ಭರ್ತಿಮಾಡಿಕೊಳ್ಳುತ್ತಿದ್ದಾರೆ. ತನ್ನವರಿಗೆ ಮಾತ್ರ ಅಲ್ಲಿ ಕೆಲಸ ಕೊಟ್ಟು ಇತರರಿಗೆ ಅವಕಾಶ ಸಿಕ್ಕದಂತೆ ಮಾಡಿರುತ್ತಾರೆ. ಈ ಪದ್ಧತಿಯನ್ನು ಸರ್ಕಾರದವರು ಕೂಡಲೇ ರದ್ದುಮಾಡಿ ಆ ಇಲಾಖೆಯಲ್ಲಿ ಖಾಲಿ ಬೀಳತಕ್ಕ ಪ್ರತಿಯೊಂದು ವೇಕೆನ್ಸಿಯನ್ನೂ P.S.C.ಗೆ ಕಳುಹಿಸಿ ಅವರ ಮೂಲಕ ಭರ್ತಿಮಾಡುವಂತೆ ಏರ್ಪಾಡು ಮಾಡಬೇಕು. ಇಲ್ಲಿಗೆ ಎಷ್ಟೋದಿವಸಗಳಿಂದ ಆ ಇಲಾಖೆಯಲ್ಲಿ ಒಂದು ಅಸಿಸ್ಟೆಂಟ್ ಸ್ಟ್ಯಾಟಿಸ್ ಟೀಷಿಯರ್ ಸ್ಥಾನ ಹಾಗೆಯೇ ಖಾಲಿ ಬಿದ್ದಿದೆ. ಅದನ್ನು ಇಲ್ಲಿಯವರೆಗೂ ಅಡ್ವರ್‌ಟೈಸೇಮಾಡಿಲ್ಲ. ಕಾರಣವೇನೋ ಗೊತ್ತಿಲ್ಲ. ಆ ಇಲಾಖೆಯಲ್ಲಿ ರೇಷಿಯೋ ಪ್ರಕಾರ ಪ್ರಮೋಷನ್ ಕೊಡಬೇಕಾಗಿದೆ. ಅದನ್ನೂ ಸಹ ಜಾರಿಗೆ ತಂದಿಲ್ಲ. ಈ ಅನೀತಿಗಳನ್ನೆಲ್ಲ ಮೊದಲು ಸರಿಪಡಿಸಬೇಕು. ಖಾಲಿ ಬೀಳತಕ್ಕ ಸ್ಥಾನಗಳಿಗೆ P.S.C. ಮೂಲಕ ಅಡ್ವರ್‌ಟೈಸ್‌ಮಾಡಿ ಆ ಸ್ಥಾನಗಳಿಗೆ ನೌಕರರನ್ನು ಭರ್ತಿಮಾಡುವಂತೆ ಏರ್ಪಾಡುಮಾಡಿ ಮುಂದಕ್ಕಾದರೂ ಈ ಇಲಾಖೆ ಜನಗಳಿಗೆ ಸರಿಯಾದಂಥ ನ್ಯಾಯವಾದಂಥ ಅಂಕಿಅಂಶಗಳನ್ನು ಒದಗಿಸುವಂತೆ ಏರ್ಪಾಡು ಮಾಡಬೇಕೆಂದು ಸೂಚಿಸುತ್ತೇನೆ.

ಇನ್ನು ಇದೇ ಡಿಮ್ಯಾಂಡಿಗೆ ಸಂಬಂಧಪಟ್ಟಹಾಗೆ (ಜಿ) ಐಟಂನಲ್ಲಿ Fire-Service ಗೆ 5,61,600 ರೂಪಾಯಿಗಳನ್ನೊದಗಿಸಿದ್ದೀರಿ. ಈ ಮೊಬಲಗನ್ನು ತಾವು ಈ ದಿವಸ ಕೇವಲ ಸಿಟಿ ಪ್ರದೇಶಗಳಿಗೆ ಮಾತ್ರ ಒದಗಿಸಿರತಕ್ಕಂಥಾದ್ದಾಗಿದೆ. ನಗರ ಪ್ರದೇಶಗಳಲ್ಲಿ ಬೆಂಕಿ ಇತ್ಯಾದಿ ಏನಾದರೂ ಅನಾಹುತಗಳು ಆಕಸ್ಮಿಕವಾಗಿ ಉಂಟಾದರೆ ಅವುಗಳನ್ನು ತಡೆಗಟ್ಟತಕ್ಕ ಬಗ್ಗೆ ಈ ಹಣವನ್ನು ಒದಗಿಸಿರುತ್ತೀರಿ. ಈ ಬಾಬನ್ನು ತಾವು ಆಯಾ ನಗರ ಪ್ರದೇಶದಲ್ಲಿರತಕ್ಕ ಕಾರ್ಪೊರೇಷನ್ ಅಥವಾ ಮುನಿಸಿಪಾಲಿಟಿಗಳಿಗೆ ಬಿಟ್ಟುಬಿಡಬೇಕು. ಈ ಬಾಬಿಗೆ ತಾವು ಈಗ ಒದಗಿಸಿರತಕ್ಕ ಪೂರಾ ಮೊಬಲಗನ್ನೂ ತೆಗೆದುಹಾಕಬೇಕು. ತಾವು ಈ ದಿವಸ ಹಳ್ಳಿಗಳಿಗೆ, ಗ್ರಾಮಾಂತರ ಪ್ರದೇಶಗಳಿಗೆ ಈ ರೀತಿಯ ಸಹಾಯವನು ಎಲ್ಲಿ ಒದಗಿಸಿದ್ದೀರಿ? ಹಾಗೆ ಆ ಯಾವ ಒಂದು ಪ್ರದೇಶಗಳಿಗೂ ಒದಗಿಸಿದೆ ಕೇವಲ ಸಿಟಿ ಪ್ರದೇಶಗಳಿಗೆ ಮಾತ್ರ ಒದಗಿಸತಕ್ಕದ್ದು ತೀರ ಅನ್ಯಾಯ. ಇದನ್ನು ಕಾರ್ಪೊರೇಷನ್ ಸಂಸ್ಥೆಗೆ ಬಿಟ್ಟುಬಿಡಬೇಕು. ಇಂಥ ಬಾಬುಗಳಿಗೆಲ್ಲ ಸ್ಟೇಟ್ ಫಂಡಿನಿಂದ ಸರ್ಕಾರದವರು ಖರ್ಚುಮಾಡುವುದು ನ್ಯಾಯವಲ್ಲ. ಆದುದರಿಂದ ಸರ್ಕಾರದವರು ಈ ದಿವಸ ಬೆಂಗಳೂರು, ಮೈಸೂರು ಇತ್ಯಾದಿ ದೊಡ್ಡ ದೊಡ್ಡ ನಗರಗಳ ಬಗ್ಗೆ Fire-Service ಎಂಬ ಬಾಬಿನಲ್ಲಿ ಒದಗಿಸಿರತಕ್ಕ ಪೂರಾ ಹಣವನ್ನು ವಜಾಮಾಡಿ ಈ ಬಾಬನ್ನು ಆಯಾಯ ಕಾರ್ಪೊರೇಷನ್ನಿಗೋ ಅಥವಾ ಮುನಿಸಿಪಾಲಿಟಿಗೋ ವಹಿಸಬೇಕೆಂದು ಸೂಚಿಸುತ್ತೇನೆ. ಈ ಬಾಬಿಗಾಗಿ ಸರ್ಕಾರ ಸ್ಟೇಟ್ ಫಂಡಿನಿಂದ ಹಣವನ್ನು ಖರ್ಚುಮಾಡಬಾರದು. ಇನ್ನು 28ನೆಯ ಡಿಮ್ಯಾಂಡಿನಲ್ಲಿ ಮಿಸ್ಸೆಲ್ಲೇನಿಯಸ್ ಎಂಬ ಬಾಬಿನಲ್ಲಿ 28,89,300 ರೂಪಾಯಿಗಳನ್ನು ತೋರಿಸಿದ್ದಾರೆ ಈ ಹಣವನ್ನು ಯಾವ ಹೆಡಿನಲ್ಲಿ ಖರ್ಚುಮಾಡುತ್ತಾರೆಂಬುದನ್ನು ನಾವು ಎಸ್ಟಿಮೇಟ್ ಮಾಡುವುದಕ್ಕೂ ಕೂಡ ಆಗುತ್ತಿಲ್ಲ. ಈ ಬಗ್ಗೆ ಸಾಕಷ್ಟು ವಿವರಗಳನ್ನೊದಗಿಸಿಲ್ಲ. Charges in England ಎಂಬ ಬಾಬಿನ ಬಡ್ಜೆಟ್ಟಿಗೆ 29,500 ರೂಪಾಯಿಗಳನ್ನು ತೋರಿಸಿದ್ದಾರೆ. ಆದರೆ ಫಾರಿನ್ ಟ್ರೇಡಿಂಗ್‌ನಿಂದ ನಮಗೆಷ್ಟು ಆದಾಯ ಬರುತ್ತದೆಯೆಂಬುದನ್ನು ಎಲ್ಲಿಯೂ ತಿಳಿಸಿಲ್ಲ. ನಾವು ಈ ಒಂದು ಬಾಬಿಗೆ ಇಷ್ಟು ಹಣವನ್ನು ವೆಚ್ಚಮಾಡುವಾಗ ನಮಗೆ ಫಾರಿನ್ ಟ್ರೇಡಿಂಗ್‌ನಿಂದ ಕನಿಷ್ಟ ಪಕ್ಷ 50 ಲಕ್ಷ ರೂಪಾಯಿಗಳ ಉತ್ಪತ್ತಿಯಾದರೂ ಬರಬೇಕು. ಆದುದರಿಂದ ಈ ಹೆಡ್ಡಿನಲ್ಲಿ ಖರ್ಚುಮಾಡುತ್ತಿರುವ ಹಣ ಜಾಸ್ತಿ ಆಗಿದೆ. ಇದನ್ನು ಕಡಮೆಮಾಡಬೇಕು. ಏನೋ ಕೆಲವರು ಇಂಗ್ಲೆಂಡಿಗೆ ಹೋಗಿಬರತಕ್ಕ ಉದ್ದೇಶವನ್ನು ಈಡೇರಿಸಲು ಈ ಒಂದು ಮಾರ್ಗವನ್ನು ಇಟ್ಟುಕೊಂಡಿರುವಂತೆ ತೋರುತ್ತಿದೆಯೇ ಶಿವಾಯಿ ಇದರಿಂದ ದೇಶಕ್ಕೇನೂ ಉತ್ಪತ್ತಿ ಬರುತ್ತಿಲ್ಲ. ಇದನ್ನು ಕೂಡಲೆ ಕಮ್ಮಿಮಾಡಬೇಕೆಂದು ಹೇಳುತ್ತೇನೆ.

ಇನ್ನು 19ನೆಯ ಡಿಮ್ಯಾಂಡಿಗೆ ಬಂದರೆ ಸ್ಟೇಂಟಫಿಕ್ ಡಿಪಾರ್ಟ್‌ಮೆಂಟ್ಸ್ ಎಂಬ ಹೆಡ್ಡಿನಲ್ಲಿ ಮೈನಿಂಗ್ ಐಟಂಗೆ 7,96,600 ರೂಪಾಯಿಗಳನ್ನು ಒದಗಿಸಲಾಗಿದೆ. ಹಿಂದೆಯೂ ಸಹ ಹೀಗೆ ತೋರಿಸುತ್ತಿದ್ದರು. ಈಗಲೂ ಹಾಗೆ ತೋರಿಸಿದ್ದಾರೆ. ಆದರೆ ಈ ಬಾಬಿನಿಂದ ಸರ್ಕಾರಕ್ಕೆ ಹೆಚ್ಚಿನ ಉತ್ಪತ್ತಿ ಬರುತ್ತದೆ. ಈ ಇಲಾಖೆಯ ವಿಷಯದಲ್ಲಿ ನಾನೀಗ ಎರಡು ಮಾತುಗಳನ್ನಾಡಬಯಸುತ್ತೇನೆ. ಸರ್ಕಾರ ರಾಷ್ಟ್ರೀಕರಣಮಾಡಿಕೊಳ್ಳತಕ್ಕಂಥ ಬಾಬುಗಳ ಪೈಕಿ ಇದೂ ಸಹ ಒಂದಾಗಿದೆ. ಯಾವ ಪ್ರದೇಶದ ಗಣಿಗಳಲ್ಲಿ ಹೆಚ್ಚಿನ ಪರ್ಸೆಂಟೇಜ್‌ನಲ್ಲಿ ಓರ್‌ಸಿಕ್ಕುತ್ತದೋ ಅಂಥ ಗಣಿಗಳನ್ನು ರಾಷ್ಟ್ರೀಕರಣಮಾಡಿಕೊಳ್ಳುವುದು ಸೂಕ್ತ. ಹೀಗೆ ಮಾಡತಕ್ಕದ್ದು ಆರ್ಥಿಕ ದೃಷ್ಟಿಯಿಂದಲೂ ಮತ್ತು ಇತರ ದೃಷ್ಟಿಯಿಂದಲೂ ಅನುಕೂಲವಾದದ್ದು. ಹೀಗೆ ಮಾಡಿದರೆ ನಾವು ಈ ಇಲಾಖೆಗೆ